# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 226 |
| ಸದಸ್ಯರ ಹೆಸರು | : | ಶ್ರೀ ಎಂ.ನಾಗರಾಜು<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 13-02-2024. |
| ಉತ್ತರಿಸುವ ಸಚಿವರು | : | ಮಾನ್ಯ ಪೌರಾಡಳಿತ ಮತ್ತು ಹಜ್ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | 2017 ರಿಂದ 2024ನೇ ಸಾಲಿನವರೆಗೆ ಕರ್ನಾಟಕ ರಾಜ್ಯದಲ್ಲಿ ಎಷ್ಟು ಜನರು ಹಜ್ ಯಾತ್ರೆಗೆ ರಾಜ್ಯ ಸರ್ಕಾರದ ಸಹಾಯದಿಂದ ಹೋಗಿ ಬಂದಿರುತ್ತಾರೆ. | ಪ್ರತಿ ವರ್ಷ ಯಾತ್ರಾರ್ಥಿಗಳು ತಮ್ಮ ಸ್ವಂತ ಖರ್ಚಿನಿಂದ ಹಜ್ ಯಾತ್ರೆಗೆ ಪ್ರಯಾಣ ಮಾಡುತ್ತಿದ್ದು, ರಾಜ್ಯ ಮತ್ತು ಕೇಂದ್ರ ಸರ್ಕಾರದ ವತಿಯಿಂದ ಆರ್ಥಿಕವಾಗಿ ಯಾವುದೇ ರೀತಿಯ ಅನುದಾನ / ಸಹಾಯಧನ ನೀಡಲಾಗುವುದಿಲ್ಲ. |
| ಆ. | ರಾಜ್ಯ ಸರ್ಕಾರದಿಂದ ಈ ಯೋಜನೆಗೆ ಖರ್ಚು ಮಾಡಿರುವ ಹಣವೆಷ್ಟು; (ವರ್ಷವಾರು ಮಾಹಿತಿ ನೀಡುವುದು. | ಉದ್ಭವಿಸುವುದಿಲ್ಲ. |
| ಇ. | ಈ ಹಜ್ ಯಾತ್ರಿಗಳಿಗೆ ನೀಡುತ್ತಿರುವ ಸೌಲಭ್ಯಗಳ ಮಾಹಿತಿಯನ್ನು ನೀಡುವುದು. | ಕರ್ನಾಟಕ ರಾಜ್ಯ ಹಜ್ ಸಮಿತಿಯ ವತಿಯಿಂದ ಹಜ್ ಯಾತ್ರಿಕರಿಗೆ ಈ ಕೆಳಕಂಡ ಸೌಕರ್ಯ/ ಸೌಲಭ್ಯವನ್ನು ಒದಗಿಸಲಾಗುತ್ತಿದೆ.<br><br>1. ಹಜ್ ಯಾತ್ರೆಗಾಗಿ ಅರ್ಜಿದಾರರು ಆನ್ ಲೈನ್ ಮೂಲಕ ಮುಂಬೈನ ಭಾರತೀಯ ಹಜ್ ಸಮಿತಿಯವರು ನೀಡಿರುವ ಮಾನದಂಡಗಳನ್ನು ಅನುಸರಿಸಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬೇಕಾಗಿರುತ್ತದೆ. ಅದರಂತೆ, ಸ್ವೀಕೃತವಾದ ಅರ್ಜಿಗಳನ್ನು ಪರಿಶೀಲನೆ ಮಾಡುವುದು, ದಾಖಲೆಗಳನ್ನು ಸ್ಕ್ಯಾನ್ ಮಾಡುವುದು, ಮುಂಬೈನ ಭಾರತೀಯ ಹಜ್ ಸಮಿತಿಯ ಸರ್ವರ್‌ನಲ್ಲಿ ಅಪ್ ಲೋಡ್ ಮಾಡಲು ಸೂಕ್ತ ಸಹಕಾರ ನೀಡಲಾಗುವುದು.<br>2. ಮುಂಬೈನ ಭಾರತೀಯ ಹಜ್ ಸಮಿತಿಯ ವತಿಯಿಂದ ಕಲ್ಪಿಸಿರುವ ಕೇಂದ್ರಿಕೃತ ವೆಬ್ ಸರ್ವರ್‌ನಿಂದ ಗಣೀಕೃತ ಲಾಟರಿ (ಖುರ್ರಾ) ಮುಖಾಂತರ ಜಿಲ್ಲಾವಾರು ನಿಗದಿಪಡಿಸಿರುವ ಖೋಟಾದನ್ವಯ ಹಜ್ ಯಾತ್ರಿಕರ ಆಯ್ಕೆ ಪ್ರಕ್ರಿಯೆ ಆಯೋಜಿಸುವುದು. |

| | | |
|---|---|---|
| | | 3. ಆಯ್ಕೆಯಾದ ಹಜ್ ಯಾತ್ರಿಕರಿಂದ ಅಂತರರಾಷ್ಟ್ರೀಯ ಪಾಸ್‌ಪೋರ್ಟ್‌ಗಳನ್ನು, ವೈದ್ಯಕೀಯ ಪ್ರಮಾಣ ಪತ್ರ ಮತ್ತು ಇನ್ನಿತರೆ ಅಗತ್ಯ ದಾಖಲೆಗಳನ್ನು ಸಂಗ್ರಹ ಮಾಡಿ, ಮುಂಬೈನ ಭಾರತೀಯ ಹಜ್ ಸಮಿತಿಯ ಕಚೇರಿಗೆ ವರ್ಗಾಯಿಸುವುದು.<br>4. ಆಯ್ಕೆಯಾದ ಯಾತ್ರಿಕರಿಗೆ ಹಾಗೂ ಖಾಸಗಿಯಾಗಿ ಹಜ್ ಯಾತ್ರೆಗೆ ಪ್ರಯಾಣಿಸುವ ಯಾತ್ರಿಕರು ಸೇರಿದಂತೆ ಮೆನಂಜೈಟಿಸ್ ಲಸಿಕೆ ಚುಚ್ಚು ಮದ್ದು ಜಿಲ್ಲಾವಾರು ಕಾರ್ಯಕ್ರಮವನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಹಕಾರದಿಂದ ಆಯೋಜಿಸುವುದು.<br>5. ಯಾತ್ರಿಕರಿಗೆ ಹಜ್ ಯಾತ್ರೆಯು ಸುಗಮವಾಗಿ ಹಾಗೂ ಸುಖಕರವಾಗಿ ಮಾಡಲು ಸಹಾಯಕವಾಗುವಂತೆ ತರಬೇತಿ (ಓರಿಯಂಟೇಷನ್) ಕಾರ್ಯಕ್ರಮವನ್ನು ರಾಜ್ಯ ಹಜ್ ಸಮಿತಿಯು ಆಯೋಜಿಸುತ್ತದೆ.<br>6. ಸೌದಿ ಅರೇಬಿಯಾದಲ್ಲಿ ಕರ್ನಾಟಕ ರಾಜ್ಯದಿಂದ ಬರುವ ಹಜ್ ಯಾತ್ರಿಕರ ಕಲ್ಯಾಣವನ್ನು ನೋಡಿಕೊಳ್ಳಲು ಹಜ್ ಸ್ವಯಂ ಸೇವಕರನ್ನಾಗಿ (ಖಾದಿಮುಲ್ ಹುಜ್ಜಾಜ್) ಸರ್ಕಾರಿ ನೌಕರರನ್ನು ನಿಯೋಜನೆ ಮಾಡುವುದು. ಈ ನಿಯೋಜನೆಗಾಗಿ ತಗಲುವ ವೆಚ್ಚವನ್ನು ಮುಂಬೈನ ಭಾರತೀಯ ಹಜ್ ಸಮಿತಿ ಹಾಗೂ ರಾಜ್ಯ ಹಜ್ ಸಮಿತಿಯು 50:50ರ ಅನುಪಾತದಲ್ಲಿ ಭರಿಸುತ್ತದೆ.<br>ಹಜ್-2023ನಲ್ಲಿ ಮುಂಬೈನ ಭಾರತೀಯ ಹಜ್ ಸಮಿತಿಯ ನಿರ್ದೇಶನದಂತೆ ಪ್ರತಿ 300 ಯಾತ್ರಿಕರಿಗಾಗಿ ಒಬ್ಬ ಖಾದಿಮುಲ್ ಹುಜ್ಜಾಜ್ ರನ್ನು ರಾಜ್ಯ ಹಜ್ ಸಮಿತಿಯು ನಿಯೋಜಿಸಿರುತ್ತದೆ.<br>7. ಭಾರತೀಯ ಹಜ್ ಸಮಿತಿಯಿಂದ ಸ್ವೀಕೃತವಾಗುವ ಕನ್ನಡ, ಇಂಗ್ಲೀಷ್ ಮತ್ತು ಉರ್ದು ಭಾಷೆಗಳಲ್ಲಿ ಹಜ್ ಗೈಡ್ ಪುಸ್ತಕಗಳನ್ನು ಪ್ರತಿ ವರ್ಷ ಆಯ್ಕೆಯಾದ ಹಜ್ ಯಾತ್ರಿಕರಿಗೆ ಉಚಿತವಾಗಿ ಸರಬರಾಜು ಮಾಡುವುದು.<br>8. ಯಾವುದೇ ಹಜ್ ಸಂಬಂಧಿತ ಮಾಹಿತಿಯನ್ನು ಯಾತ್ರಾರ್ಥಿಗಳಿಗೆ ತಲುಪಿಸುವುದು.<br>9. ಹಜ್ ಯಾತ್ರಿಗಳ ಸುಗಮ, ಸುಖಕರ ಪ್ರಯಾಣಕ್ಕಾಗಿ ಹಾಗೂ ಸೌದಿ ಅರೇಬಿಯಾಕ್ಕೆ ಹಜ್ ಯಾತ್ರಾರ್ಥಿಗಳ ಪ್ರಯಾಣ ಅರಂಭವಾಗುವ ಮುನ್ನ ರಾಜ್ಯ ಹಜ್ ಸಮಿತಿಯು ಹಜ್ ಕ್ಯಾಂಪನ್ನು ಬೆಂಗಳೂರಿನ |

| | | |
|---|---|---|
| | | ಹಜ್ ಭವನದಲ್ಲಿ ಆಯೋಜಿಸುತ್ತಿದ್ದು, ಈ ಹಜ್ ಕ್ಯಾಂಪ್‌ನಲ್ಲಿ ತಮ್ಮ ಪ್ರಯಾಣಕ್ಕೆ ಮುನ್ನ ಹಜ್ ಯಾತ್ರಿಗಳು ಉಳಿದುಕೊಳ್ಳಲು ಎಲ್ಲಾ ವ್ಯವಸ್ಥೆಯನ್ನು (ಬೋರ್ಡಿಂಗ್ ಮತ್ತು ಲಾಡ್ಜಿಂಗ್) ರಾಜ್ಯ ಹಜ್ ಸಮಿತಿಯು ಮಾಡುತ್ತಿದ್ದು, ಕಾಗದ ಪತ್ರಗಳ ಹಂಚಿಕೆಯ ವ್ಯವಸ್ಥೆ, ವಿದೇಶಿ ವಿನಿಮಯ ಹಂಚಿಕೆಯ ವ್ಯವಸ್ಥೆ, ಯಾತ್ರಾರ್ಥಿಗಳನ್ನು ವಿಮಾನ ನಿಲ್ದಾಣಕ್ಕೆ ತಲುಪಿಸುವ ಸಾರಿಗೆ ವ್ಯವಸ್ಥೆ ಹಾಗೂ ಇನ್ನಿತರೇ ವ್ಯವಸ್ಥೆಗಳನ್ನು ಹಜ್ ಕ್ಯಾಂಪ್ ಗಳಲ್ಲಿಯೇ ಸಂಬಂಧಪಟ್ಟ ಇಲಾಖೆಗಳ ಸಹಕಾರದಿಂದ ಒದಗಿಸಲಾಗುತ್ತದೆ.<br>10. ಹಜ್ ವಿಮಾನ ಕಾರ್ಯಾಚರಣೆ ಇತ್ಯಾದಿಗಳ ಯಶಸ್ವಿ ವ್ಯವಸ್ಥೆಗಾಗಿ, ಭಾರತ ಸರ್ಕಾರ, ರಾಜ್ಯ ಸರ್ಕಾರ, ಮುಂಬೈನ ಭಾರತೀಯ ಹಜ್ ಸಮಿತಿ ಮತ್ತು ಇನ್ನಿತರೇ ಸಂಸ್ಥೆಗಳಾದ ಸೌದಿ ಅರೇಬಿಯನ್ ಏರ್‌ಲೈನ್ / ಏರ್ ಇಂಡಿಯಾ, ಏರ್‌ಪೋರ್ಟ್ ಅಥಾರಿಟಿ ಆಫ್ ಇಂಡಿಯಾ, ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಲಿಮಿಟೆಡ್, ಇಮಿಗ್ರೇಷನ್, ಕಸ್ಟಮ್ಸ್, ಪೊಲೀಸ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮತ್ತು ಇತರೇ ಸ್ವಯಂ ಸೇವಾ ಸಂಸ್ಥೆಗಳೊಂದಿಗೆ ಸಮನ್ವಯ ಸಾಧಿಸುವುದು.<br>11. ಹಜ್ ವಿಮಾನಗಳಲ್ಲಿ ಪ್ರಯಾಣಿಸುವ ಯಾತ್ರಿಕರ ನಿರ್ಗಮನ ಹಾಗೂ ಆಗಮನದ ಸಮಯಗಳಲ್ಲಿ ವಸತಿ, ಸಾರಿಗೆ ಇತ್ಯಾದಿಗಳಿಗೆ ಸಹಾಯಕ ವ್ಯವಸ್ಥೆಗಳನ್ನು ಮಾಡುವುದು. |

ಸಂಖ್ಯೆ:MWD 08 LMQ 2024

(ರಹೀಂ ಖಾನ್)
ಪೌರಾಡಳಿತ ಮತ್ತು ಹಜ್ ಸಚಿವರು

ರಹೀಂ ಖಾನ್
ಪೌರಾಡಳಿತ ಹಾಗೂ ಹಜ್ ಸಚಿವರು